



ಅರುಣ ಪಿ. ಭಟ್ಟ

## ವಾರಭವಿಷ್ಯ: 31.10.2024ರಿಂದ 06.11.2024ರವರೆಗೆ



**ಮೇಷ**

ಶ್ರಮದ ಕೆಲಸಗಳಿಂದ ಸಾರ್ಥಕತೆಯ ಭಾವನೆ ನಿಮ್ಮಲ್ಲಿ ಕಾಣಬಹುದು. ಉದ್ಯೋಗ ಸ್ಥಳದಲ್ಲಿ ವರ್ಚಸ್ಸು ಹೆಚ್ಚುವ ಸಾಧ್ಯತೆ ಇದೆ. ಹಿರಿಯ ಅಧಿಕಾರಿಗಳ ಜೊತೆ ನಿಮ್ಮ ಬಾಂಧವ್ಯ ಗಟ್ಟಿ ಆಗಲಿದೆ. ಬಾಕಿ ಇರುವ ಹಲವು ಕೆಲಸಗಳನ್ನು ಪೂರ್ಣಗೊಳಿಸುತ್ತೀರಿ. ಪ್ರೋತ್ಸಾಹಕರ ಸಂತೋಷಕ್ಕೆ ಕಾರಣರಾಗುತ್ತೀರಿ. ಕೌಟುಂಬಿಕವಾಗಿ ಬಹಳ ನೆಮ್ಮದಿಯಾಗಿ ಇರುತ್ತೀರಿ. ಶುಭದಿನ 08: ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.



**ವೃಷಭ**

ನಿಮ್ಮ ಕೆಲಸದಲ್ಲಿ ಉತ್ತಮ ಫಲಿತಾಂಶ ಹಾಗೂ ಆದಾಯ ವೃದ್ಧಿಯಾಗಲಿದೆ. ನೀವು ಒಬ್ಬರಿಗೆ ಒಳ್ಳೆಯದು ಬಯಸಿದರೆ ಅದಕ್ಕೆ ಕೆಲವರು ಅಪಾರ್ಥ ಮತ್ತು ಅಪಹಾಸ್ಯದಿಂದ ವರ್ತಿಸಬಹುದು. ನಿಮ್ಮ ಮೇಲಧಿಕಾರಿಗಳ ಇಲ್ಲವೆ ಮನೆಯ ಹಿರಿಯರ ಒಲುಮೆ ಗಳಿಸಿಕೊಳ್ಳುವಿರಿ. ನಿಮ್ಮ ನಡತೆಯು ಹೆಚ್ಚು ಪ್ರಶಂಸೆಗೆ ಒಳಪಡುವುದು. ಮಂಗಲ ಕಾರ್ಯದಲ್ಲಿ ಭಾಗಿಯಾಗುವಿರಿ. ಶುಭದಿನ 09: ಆದಿತ್ಯ ಹೃದಯ ಪಠಿಸಿರಿ.



**ಮಿಥುನ**

ನಿಮ್ಮಲ್ಲಿನ ಜಡತ್ವ ಕರಗಿ ಹೋಗಲಿದೆ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದನೆ ಮಾಡಲಿದ್ದೀರಿ. ಸಂಗಾತಿ ಬಯಕೆಗಳಿಗೆ ನೀವು ಸಮ್ಮತಿಯ ವಾಗ್ದಾನ ನೀಡಲಿದ್ದೀರಿ. ಮಕ್ಕಳ ಕೆಲವು ವರ್ತನೆಗಳು ನಿಮ್ಮ ಮನದಲ್ಲಿ ಬೇಸರ ತರಿಸಲಿವೆ. ಆದಷ್ಟು ಅವರನ್ನು ಸರಿಪಡಿಸಲು ಯೋಜನೆ ರೂಪಿಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ಶುಭದಿನ: 10. ಸೌಂದರ್ಯಲಹರಿ ಪಠಿಸಿರಿ.



**ಕಟಕ**

ಕೆಲಸದಲ್ಲಿ ಅನಗತ್ಯವಾಗಿ ತೊಂದರೆ ಬರಬಹುದಾಗಿದೆ. ಆದಷ್ಟು ಸಮಸ್ಯೆ ಪರಿಹಾರ ಕಾರ್ಯಗಳನ್ನು ನೀವೇ ನಿಂತು ಮಾಡುವುದು ಒಳಿತು. ಸಾಲ ವಸೂಲಾತಿಯಲ್ಲಿ ನಿಮ್ಮ ನಿರೀಕ್ಷೆ ಹುಸಿಯಾಗಲಿದೆ. ನಿಮ್ಮ ಬುದ್ಧಿ ಬಲದಿಂದ ಪದೋನ್ನತಿ ಸಿಗುವುದು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಓದು ಮುಂದುವರಿಕೆಯ ಬಗ್ಗೆ ಚಿಂತನೆ ನಡೆಸುವಿರಿ. ಟೀಕೆಗಳಿಗೆ ಕಿವಿಗೊಡದಿರಿ. ಶುಭದಿನ 09: ಕಾಲಭೈರವನ ಆರಾಧನೆ ಮಾಡಿರಿ.



**ಸಿಂಹ**

ವಿವೇಚನಾರಹಿತ ಹೂಡಿಕೆಗಳಿಂದ ಧನ ನಷ್ಟ ಆಗುವ ಸಂಭವ ಕಾಣಬಹುದಾಗಿದೆ. ನಿಮ್ಮ ವಿಚಾರವೇ ನಡೆಯಬೇಕೆಂಬ ವಾದ ಅತಿಶಯೋಕ್ತಿಯಾಗಿ ಕಾಣಬಹುದು. ನಿಮ್ಮ ಆಲೋಚನೆ ಉತ್ತಮ ಪರಿಕಲ್ಪನೆಯಾಗಿದ್ದು ಇದರಿಂದ ಅನುಕೂಲ ಆಗಬಹುದು. ಸಾಲದ ತೀರುವಳಿ ಮಾಡಿದಲ್ಲಿ ಉತ್ತಮ. ಇತರ ವ್ಯಕ್ತಿಗಳು ನಿಮ್ಮ ಕೆಲಸದಿಂದ ಮೆಚ್ಚುತ್ತಾರೆ. ಶುಭದಿನ 12: ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ



**ಕನ್ಯಾ**

ಹಿರಿಯರ ಬಗ್ಗೆ ಗೌರವ ನೀಡುವುದು ಒಳ್ಳೆಯದು. ಉತ್ತಮ ಆರ್ಥಿಕ ಗಳಿಕೆ ಇದ್ದರು ಸಹ ಕೆಲವೊಂದು ವಿಷಯಗಳಲ್ಲಿ ನಿಮ್ಮ ದುಡುಕುತನ ದೊಡ್ಡ ಪೆಟ್ಟನ್ನು ನೀಡಬಹುದಾಗಿದೆ. ಮನಸ್ಸು ಮರ್ಕಟವಿದ್ದಂತೆ ನಿಮ್ಮ ಮನೋಕಾಮನೆಗಳನ್ನು ಆದಷ್ಟು ನಿಯಂತ್ರಣ ಮಾಡುವುದು ಒಳ್ಳೆಯದು. ಬುದ್ಧಿ ಕೌಶಲ್ಯಕ್ಕೆ ಎದುರಾಗುವುದು. ಶುಭದಿನ 11: ಹನುಮಾನ್ ಚಾಲೀಸ್ ಪಠಿಸಿರಿ.



**ತುಲಾ**

ಕೆಲಸದಲ್ಲಿ ಹೆಚ್ಚಿನ ವಿಳಂಬದಿಂದ ನಿಮ್ಮ ಬಗ್ಗೆ ಮಾತುಗಳನ್ನಾಡುವರು. ಕೆಲ ವಿಚಾರಗಳಲ್ಲಿ ಅತಿಯಾದ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ಯೋಜನೆಗಳ ವಿಸ್ತರಣೆಗೆ ಅವಕಾಶಗಳು ಸಿಗುವ ಸಾಧ್ಯತೆ ಇದೆ. ಟೀಕಿಸುವಂತಹ ಜನರ ಕುರಿತು ಆತಂಕ ಪಡಬೇಕಾಗಿಲ್ಲ. ನಿಮ್ಮ ಸುತ್ತಮುತ್ತಲ ಜನರೇ ನಿಮ್ಮನ್ನು ಅಡ್ಡಹಾದಿಗೆ ಎಳೆಯುತ್ತಿರುತ್ತಾರೆ. ಶುಭದಿನ 13: ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.



**ವೃಶ್ಚಿಕ**

ಆರ್ಥಿಕವಾಗಿ ಬೆಳವಣಿಗೆ ಸಾಧಿಸುವಿರಿ. ರಾಜಿ ಪಂಚಾಯಿತಿಗಳಿಗೆ ಹೋಗದಿರುವುದು ತುಂಬಾ ಸೂಕ್ತ. ಸುಖಾಸುಮ್ಮನೆ ಕದನಕ್ಕೆ ಬರುವಂತಹ ಜನಗಳು ಕಂಡುಬರುತ್ತಾರೆ. ಸಂಗಾತಿಯ ಜೊತೆಗೆ ಖರೀದಿ ಪ್ರಕ್ರಿಯೆಗಳನ್ನು ಮಾಡಲು ಇಚ್ಛಿಸುತ್ತೀರಿ. ಸಹೋದ್ಯೋಗಿಗಳ ಜೊತೆ ನಿಮ್ಮ ಯಶಸ್ಸಿನ ಗುಟ್ಟನ್ನು ಹಂಚಿಕೊಳ್ಳಬೇಡಿ. ವಾರದ ಕೊನೆಯಲ್ಲಿ ಒಳಿತಾಗುವುದು. ಶುಭದಿನ 09: ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.



**ಧನಸ್ಸು**

ನಿಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತೀರಿ. ಆ ಮೂಲಕ ಹಲವು ಕಾರ್ಯಗಳನ್ನು ಪೂರ್ಣಗೊಳಿಸುತ್ತೀರಿ. ನಿಮ್ಮ ಸ್ಥಾನಮಾನ ಹೆಚ್ಚಲಿದೆ. ವಾರದ ಅಂತ್ಯಕ್ಕೆ ಸರಿಯುತ್ತಾ ದೈಹಿಕ ನೋವುಗಳು ಕಾಡುತ್ತವೆ. ದೈಹಿಕ ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಿ. ಮನೆಯ ದಾಖಲೆಗಳನ್ನು ಗಮನವಿಟ್ಟು ಕೆಲಸದಲ್ಲಿ ಪಾಲ್ಗೊಳ್ಳಿ. ಶುಭದಿನ 12: ಚಂಡಿ ಪಾರಾಯಣ ಮಾಡಿರಿ.



**ಮಕರ**

ಹೊಸ ಯೋಜನೆಗೆ ಈ ವಾರ ಸಿದ್ಧತೆ ನಡೆಸುತ್ತೀರಿ. ಕೃಷಿ ಚಟುವಟಿಕೆಗಳಲ್ಲಿ ಉತ್ತಮವಾದ ಬೆಳವಣಿಗೆ ಕಂಡುಬರುತ್ತದೆ. ಆತ್ಮೀಯರ ಬಳಿ ಹಣಕಾಸಿನ ನೆರವು ಕೇಳುವ ಸಾಧ್ಯತೆ ಇದೆ. ನಿಮ್ಮ ಆಲಸ್ಯದಿಂದ ಕೆಲಸ ಕಾರ್ಯಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾಗುವುದು. ಸಂಬಂಧಗಳಲ್ಲಿ ಸಂತಸ ಇರುತ್ತದೆ. ಅಗತ್ಯ ಇರುವವರಿಗೆ ನೆರವನ್ನು ನೀಡುತ್ತೀರಿ. ಶುಭದಿನ 10: ಮಾರುತಿ ಉಪಾಸನೆ ಪೂಜೆ ಮಾಡಿರಿ.



**ಕುಂಭ**

ಈ ವಾರ ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಸಂತೋಷದ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಕುಟುಂಬದಲ್ಲಿ ಅನಿರೀಕ್ಷಿತ ಸಂಕಷ್ಟ ಎದುರಾಗಬಹುದು. ದೃಢಮನಸ್ಸಿನಿಂದ ಕಾರ್ಯಗಳಲ್ಲಿ ಸಫಲರಾಗುವಿರಿ. ಸಮಸ್ಯೆಗಳ ಸುಳಿವಿನಿಂದ ಹೊರಬರಲು ಪ್ರಯತ್ನ ಮೆಚ್ಚುವಂತಹದ್ದು. ಮನೆಗೆ ನೆಂಟರಿಷ್ಟರ ಆಗಮನ ಸಾಧ್ಯತೆ. ಶುಭದಿನ 11: ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.



**ಮೀನ**

ಕೌಟಂಬಿಕ ಸಮಸ್ಯೆಗಳು ಸರಿಹೋಗಲಿವೆ. ಉದ್ಯೋಗದ ಸ್ಥಿತಿಗತಿಗಳು ಚೇತರಿಕೆಯತ್ತ ಸಾಗುತ್ತದೆ. ಉದ್ಯೋಗದಲ್ಲಿ ಪ್ರಗತಿ ಸಾಧ್ಯತೆ ಇದೆ. ಯಶಸ್ವಿದಾಯಕ ನಿರ್ಣಯಗಳಿಂದ ಸ್ಥಾನ ಗಟ್ಟಿಗೊಳಿಸಿಕೊಳ್ಳುವಿರಿ. ನಿಮ್ಮ ವಿಶಾಲ ಮನಸ್ಥಿತಿಯು ದೊಡ್ಡ ದೊಡ್ಡ ಕಾರ್ಯಗಳನ್ನು ಲೀಲಾಜಾಲವಾಗಿ ಮಾಡಿ ಮುಗಿಸುತ್ತದೆ. ಪ್ರೇಮಿಗಳಿಗೆ ವಿವಾಹ ಭಾಗ್ಯ. ಶುಭದಿನ 09: ವಿಷ್ಣು ಸಹಸ್ರನಾಮ ಮಾಡಿರಿ.